ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

'MUNJAVU' Kannada Weekly, KOP-A-CHM. ಫೋನ್ : ೧೧೪

೧೧ನೇ ವರ್ಷ ೩ನೇ ಸಂಚಿಕೆ ಕೊಪ್ಪ ೨೦-೧-೧೯೯೧ ಭಾನುವಾರ ಬೆಲೆ ೬೦ ಪೈಸೆ

ಹೊಟ್ಟೆಯೊಳಗೆ ಬೆಳೆದಿದ್ದ ೨೧೦ಗ್ರಾಂ ಕಲ್ಲು!

ಕೊಪ್ಪ : ಇಲ್ಲಿನ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ|| ಎಂ. ಜಿ. ಪ್ರಸಾದ್ ಜ. ೧೧ ರಂದು ಪುಟ್ಟೇಗೌಡ ಎಂಬ ೫೬ ವರ್ಷ ಪ್ರಾಯದ ವ್ಯಕ್ತಿಗೆ ವಿಶಿಷ್ಟವಾದ ಶಸ್ತ್ರ ಚಿಕಿತ್ಸೆಯೊಂದನ್ನು ನೆರವೇರಿಸಿ, ಅವರ ಮೂತ್ರಕೋಶದಲ್ಲಿ ರೂಪುಗೊಂಡಿದ್ದ ೨೧೦ ಗ್ರಾಂ ತೂಕದ ಕಲ್ಲೊಂದನ್ನು ಹೊರ ತೆಗೆದಿದ್ದಾರೆ.

೪ ಅಂಗುಲ ವ್ಯಾಸ, ಒಂದೂವರೆ ಅಂಗುಲ ದಪ್ಪದ ಈ ಕಲ್ಲು ಥೇಟ್ ಹೊಳೆ ಬದಿಯ ಹೊಳಪು ಉರುಟು ಕಲ್ಲಿನಂತೆಯೇ ಇದೆ; ಯಾವ ವ್ಯತ್ಯಾಸವೂ ಇಲ್ಲ. ಮೂತ್ರಕೋಶದ ಈ ಶಸ್ತ್ರ ಚಿಕಿತ್ಸೆಗೆ ಒಂದು ಗಂಟೆ ಬೇಕಾಯಿತು. ಮೂತ್ರಕೋಶದೊಳಗಿನಿಂದ ಮತ್ತೊಂದು ಕೋಶ ರಚನೆಯಾಗಿ ಅದರಲ್ಲಿ ಈ ಕಲ್ಲು ಬೆಳೆದಿತ್ತು.

ನಮ್ಮ ಆಹಾರದ ಮೂಲಕ ರಕ್ತದಲ್ಲಿ ಫಾಸ್ಫೇಟ್, ಯೂರಿಕ್ ಆಮ್ಲ ಮುಂತಾದುವು ಜಾಸ್ತಿಯಾಗಿ, ಮೂತ್ರಕೋಶದಲ್ಲಿ ಯಾವುದಾದರೂ ರೀತಿ ಇನ್‌ಫೆಕ್ಷನ್ ಉಂಟಾಗಿ, ಈ ಅಂಶಗಳು ಹರಳುಗಟ್ಟಲು ಅವಕಾಶ ಸಿಕ್ಕಿದರೆ, ಕ್ರಮೇಣ ಆ ಹರಳು ಬೆಳೆದು ದೊಡ್ಡದಾಗಿ ಕಲ್ಲು ಬೆಳೆಯುತ್ತದೆಂದು ಡಾ|| ಪ್ರಸಾದ್ 'ಮುಂಜಾವು'ಗೆ ವಿವರಿಸಿದರು.

ಕೇವಲ ಅನ್ಸ್ಥೆಟಿಕ್ ಉಪಕರಣ ಹೊರತು ಶಸ್ತ್ರ ಚಿಕಿತ್ಸೆಗೆ ಬೇಕಾದ ಯಾವುದೇ ವಿಶಿಷ್ಟ ಸಲಕರಣೆಗಳಿಲ್ಲದೆಯೂ ಇಂಥ ಗಂಭೀರ ಶಸ್ತ್ರಕ್ರಿಯೆಗಳನ್ನು ಡಾ|| ಪ್ರಸಾದ್ ನೆರವೇರಿಸುತ್ತಿರುವುದು ಅಭಿನಂದನೀಯವೇ ಸರಿ

ಅಡಿಕೆ ಸುಲಿವ ಯಂತ್ರದ ಅಂತಿಮ ಮಾದರಿ ಸಿದ್ಧ

ಕೊಪ್ಪ : ಶೃಂಗೇರಿಯ ಯುವಕ ಇಂಜಿನಿಯರ್ ಸೋಮನಾಥ ಅಯ್ಯರ್‌ರವರು ಸತತ ೫ ವರ್ಷಗಳ ಪರಿಶ್ರಮ, ಸಂಶೋಧನೆಗಳಿಂದ ತಯಾರಿಸಿರುವ ಅಡಿಕೆ ಸುಲಿಯುವ ಯಂತ್ರದ ಪ್ರಾತ್ಯಕ್ಷಿಕೆ ಇಲ್ಲಿ ಜ. ೧೬ ರಂದು ನಡೆಯಿತು.

ಒಂದು ಅಶ್ವ ಶಕ್ತಿಯ ವಿದ್ಯುತ್ ಮೋಟರಿನಿಂದ ನಡೆಯುವ ಈ ಯಂತ್ರ ಅಡಿಕೆ ಸುಲಿದು ಉಂಡೆಯನ್ನು ಬೇರ್ಪಡಿಸುತ್ತದೆ.

ಸದ್ಯಕ್ಕೆ ಅಂತಿಮಗೊಳಿಸಿರುವ ಈ ಮಾದರಿಯಲ್ಲಿ ಇಬ್ಬರು ಯಂತ್ರದ ಜೊತೆ ಕೆಲಸ ಮಾಡಬೇಕಿದ್ದು, ಗಂಟೆಗೆ ೭ ಕೊಳಗ ಅಡಿಕೆ ಸುಲಿಯಬಹುದು. ಒಬ್ಬರೇ ನಿರ್ವಹಿಸುವಂತೆ ಇನ್ನಷ್ಟು ಸುಧಾರಿಸಿ, ಮುಂದಿನ ಅಡಿಕೆ ಕೊಯ್ಲಿನೊಳಗೆ ೧೦ ಯಂತ್ರಗಳನ್ನು ಪ್ರಾಯೋಗಿಕ ನೆಲೆಯಲ್ಲಿ ಮಾರುಕಟ್ಟೆಗೆ ಬಿಡಲು ಅಯ್ಯರ್ ಯೋಚಿಸಿದ್ದಾರೆ. ಪ್ರತಿ ಯಂತ್ರಕ್ಕೆ ಸುಮಾರು ೨೫ ಸಾವಿರ ರೂ ತಗಲುವ ಅಂದಾಜಿದೆ.

ಅಕ್ರಮ ಸಾರಾಯಿ ಅಂಗಡಿ ತೆರವಿಗೆ ಶೀಘ್ರ ಕ್ರಮ

—ಶಾಸಕರ ಭರವಸೆ

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ : ಈ ತಾಲ್ಲೂಕಿನ ವಿವಿಧೆಡೆಗಳಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ಸಾರಾಯಿ ಅಂಗಡಿಗಳನ್ನು ತೆರವು ಮಾಡಿಸಲು ಕೂಡಲೇ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸುವುದಾಗಿ ಶಾಸಕ ಯು. ಕೆ. ಶಾಮಣ್ಣ ತಿಳಿಸಿದ್ದಾರೆ

ಜ. ೧೭ರಂದು ತಾ ಪಂ ಸ. ಸಭೆಯ ನಂತರ ಈ ಕುರಿತು 'ಮುಂಜಾವು' ಶಾಸಕರ ಗಮನ ಸೆಳೆದಾಗ ಅವರು ಮೇಲಿನಂತೆ ಭರವಸೆ ನೀಡಿದರು.

ಇಂಥ ಅಂಗಡಿಗಳಿಗೆ ತೀವ್ರ ಪ್ರತಿಭಟನೆ ವ್ಯಕ್ತವಾಗುತ್ತಿದ್ದು, ಈ ಹಿನ್ನೆಲೆಯಲ್ಲೇ ಈಚೆಗೆ ವಿದ್ಯಾರಣ್ಯಪುರ ಮಂಡಲ ಸದಸ್ಯರೊಬ್ಬರು ರಾಜೀನಾಮೆ ನೀಡಿದ್ದನ್ನೂ ಇಲ್ಲಿ ಸ್ಮರಿಸಬಹುದು.

ತಾ. ಪಂ. ಸ ಸಭೆ : ಕಾಂಗ್ರೆಸೇತರ ಸದಸ್ಯರ ಸಭಾತ್ಯಾಗ

ತಾಲ್ಲೂಕು ಪಂಚಾಯ್ತಿ ಸಭೆಯ ನೋಟೀಸುಗಳನ್ನು ಸದಸ್ಯರಿಗೆ ತೀರಾ ವಿಳಂಬವಾಗಿ, ಕೆಲವೊಮ್ಮೆ ಸಭೆಯ ಹಿಂದಿನ ದಿನ ತಲುಪುವಂತೆ ಕಳಿಸಲಾಗುತ್ತಿದೆಯೆಂದು ಆಪಾದಿಸಿ, ಇಬ್ಬರು ಪ್ರಧಾನರು ಮತ್ತು ಐವರು ಕಾಂಗ್ರೆಸೇತರ ಸದಸ್ಯರು ಜ. ೧೫ರ ಶೃಂಗೇರಿ ತಾ ಪಂ.ಸ ಸಭೆಯನ್ನು ಬಹಿಷ್ಕರಿಸಿ ಹೊರ ನಡೆದರು.

ಇದರಿಂದಾಗಿ 'ಕೋರಂ' ಇಲ್ಲದೆ ಬಹಳ ಸಪ್ಪೆಯಾಗಿ ನಡೆದ ಸಭೆಯಲ್ಲಿ, ಶಾರದಾ ನಗರಕ್ಕೆ ಪ್ರತ್ಯೇಕ ಕುಡಿವ ನೀರಿನ ವ್ಯವಸ್ಥೆಗಾಗಿ ೨ ಲಕ್ಷ ರೂ.ಗಳ ಅಂದಾಜು ಪಟ್ಟಿಯನ್ನು ಅನುಮೋದಿಸಲಾಯಿತು.

ರಸ್ತೆ ಕೊರೆತ

ತುಂಗಾ ನದಿಯ ಕೊರೆತದಿಂದ ತುಂಡಾಗಲಿರುವ ಕುರುಬಗೇರಿ ರಸ್ತೆ ಉಳಿಸಲು ತಡೆಗೋಡೆಗಾಗಿ ೫ ಲಕ್ಷ ರೂ.ಗಳನ್ನು ಶಾಸಕರು ತುರ್ತಾಗಿ ಸರ್ಕಾರದಿಂದ ಮಂಜೂರು ಮಾಡಿಸಬೇಕೆಂದು ಕೆ. ವಿ. ರಾಮಪ್ಪಯ್ಯ ಒತ್ತಾಯಿಸಿದರು.

೨೬ ಲಕ್ಷ ರೂ. ವೆಚ್ಚದ ಮಿನಿ ವಿಧಾನ ಸೌಧದ ಹಲವು ಕೋಣೆಗಳು ಸೋರುತ್ತಿದ್ದು, ದುರಸ್ತಿ ಮಾಡಿ ಎಡಿಬಿ ಕಛೇರಿಗೆ ಸ್ಥಳಾವಕಾಶ ಕಲ್ಪಿಸಲು ಒಪ್ಪಲಾಯಿತು.

ಇಕ್ಕಡ್ಲುಹಳ್ಳ ಸೇತುವೆ ಕಾಮಗಾರಿಯನ್ನು ಕಂಟ್ರಾಕ್ಟರು ಕೂಡಲೇ ಪೂರೈಸದಿದ್ದರೆ ಇಲಾಖೆಯೇ ಮುಂದುವರಿಸಿ ಮುಗಿಸಬೇಕೆಂದು ಶಾಸಕರು ಸೂಚಿಸಿದರು.

ತಾ. ಪಂ. ಸ. ಸಭೆಯಲ್ಲಿ 'ನೀನು-ತಾನು' !

ಕೊಪ್ಪ: ರಾಜ್ಯದ ದ್ವಿತೀಯ ಘಟಕಗಳಲ್ಲೇ ಅತ್ಯುತ್ತಮವಾಗಿ ನಡೆಯುತ್ತಿರುವುದೆನ್ನಲಾದ ಅಸಗೋಡಿನ ಶಿಶು ಆಹಾರ ಘಟಕದಿಂದ ಅಂಗನವಾಡಿಗಳಿಗೆ ಶಿಶು ಆಹಾರ ಖರೀದಿಸದಂತೆ ಜಿಲ್ಲಾ ಪರಿಷತ್ತಿನಲ್ಲಿ ನಿರ್ಣಯ ಮಾಡಿಸಲು ಕೆಲ ಸದಸ್ಯರು ಸುಮಿತ್ರಮ್ಮನ ನೇತೃತ್ವದಲ್ಲಿ ಶ್ರಮಿಸುತ್ತಿರುವ ಹಿನ್ನೆಲೆಯಲ್ಲಿ, ಜ. ೧೮ರ ಕೊಪ್ಪ ತಾ.ಪಂ.ಸ. ಸಭೆಯಲ್ಲಿ ಶಾಸಕರಿಗೂ ವಾಸಪ್ಪನವರಿಗೂ ಹಣಾಹಣಿ ವಾಗ್ವಾದ 'ನೀನು-ತಾನು' ಎಂಬಲ್ಲಿಗೆ ಮುಟ್ಟಿತ್ತೆಂದು ತಿಳಿದು ಬಂದಿದೆ. ವಿವರಗಳು ಗೊತ್ತಾಗಿಲ್ಲ.

ಕೊಪ್ಪದಲ್ಲಿ ಔಷಧಿ ಸಸ್ಯಗಳ ಸ್ಲೈಡ್ಸ್, ಉಗಿ ಚಾಲಿತ ಪಂಪ್‌ಸೆಟ್ ವಗೈರೆ ಪ್ರದರ್ಶನ

ಕೊಪ್ಪ : ಇಲ್ಲಿನ ಜೇಸೀಸ್ ಸಂಸ್ಥೆ, ಆಯುರ್ವೇದ ಕಾಲೇಜು ಮತ್ತು ಸಿಂಡಿಕೇಟ್ ಕೃಷಿ ವಿಚಾರ ವಿನಿಮಯ ಕೇಂದ್ರಗಳ ಸಹಯೋಗದಲ್ಲಿ ದಿನಾಂಕ: ೨೫-೧-೯೧ ರ ಸಂಜೆ ೪ ಗಂಟೆಗೆ ಪುರಭವನದಲ್ಲಿ "ಸ್ವಸ್ಥ ಜೀವನಕ್ಕೆ ಸಸ್ಯಗಳ ಉಪಯೋಗ" ಬಗ್ಗೆ ವಿಚಾರ ಸಂಕಿರಣ ಮತ್ತು ಸ್ಲೈಡ್ ಪ್ರದರ್ಶನ ಏರ್ಪಡಿಸಲಾಗಿದೆ

ಬೆಂಗಳೂರು ಆಯುರ್ವೇದಿಕ್ ಕಾಲೇಜಿನ ಪ್ರಾಧ್ಯಾಪಕರು ಮತ್ತು ಆಕಾಶವಾಣಿಯ 'ಸಸ್ಯ ಸಂಜೀವಿನಿ' ಕಾರ್ಯಕ್ರಮದ ನಿರ್ದೇಶಕರಾದ ಡಾ|| ಆನಂದ ಆಳ್ವಾರ್, ಎಂ.ಡಿ., ಇವರು ಕಾರ್ಯಕ್ರಮವನ್ನು ನಡೆಸಿಕೊಡುವರು. ಆಸಕ್ತರೆಲ್ಲರೂ ಈ ಕಾರ್ಯಕ್ರಮದ ಸದುಪಯೋಗ ಪಡೆಯಲು ಸಂಘಟಕರು ಕೋರಿದ್ದಾರೆ.

ಉಗಿಚಾಲಿತ ಪಂಪ್‌ಸೆಟ್, ಸೌರಶಕ್ತಿ ಒಲೆ ಪ್ರದರ್ಶನ

ಅದೇ ದಿನ ಮಧ್ಯಾಹ್ನ ೨ ಗಂಟೆಗೆ ಜಯಪುರದ ಗಾಯಿತ್ರಿ ಇಂಜಿನಿಯರಿಂಗ್ ವರ್ಕ್ಸ್ ಮತ್ತು ಹರಿಹರಪುರದ ಕಾಳಿಕಾಂಬ ಇಂಡಸ್ಟ್ರಿಯಲ್ ಪ್ರಾಡಕ್ಟ್ಸ್ ಇವರಿಂದ ಸೌರಶಕ್ತಿ ಒಲೆ, ಅಡಿಕೆ ಬೇಯಿಸುವುದೂ ಸೇರಿದಂತೆ ಬಹೂಪಯೋಗಿಯಾದ ಗೀಸರ್ (ನೀರು ಬಿಸಿ ಮಾಡುವ ಯಂತ್ರ), ಉಗಿ ಚಾಲಿತ ನೀರೆತ್ತುವ ಯಂತ್ರ ಇವುಗಳ ಪ್ರದರ್ಶನವನ್ನು ಬಾಳಗಡಿ ರಸ್ತೆಯ ಪಕ್ಕದ ಹರಂದೂರು ವಸಂತ ಕುಮಾರ್ ಹರ್ಡೀಕರ್‌ರವರ (ಅಡಿಕೆಪತ್ರಿಕೆ ಏಜೆಂಟ್) ಕೃಷಿ ಕ್ಷೇತ್ರದಲ್ಲಿ ಏರ್ಪಡಿಸಿದೆ.

" ಲೇಖನಿ ಕೃಷಿಕನ ಉನ್ನತಿಯ ನೇಗಿಲಾಗಲಿ "

—ಪತ್ರಕರ್ತ ನಾಗೇಶ್ ಹೆಗಡೆ

"ಭಾರತಕ್ಕೆ ಸ್ವಾತಂತ್ರ್ಯ ಬಂದ ಕೂಡಲೇ ಕೃಷಿಕರ ಸ್ವಾತಂತ್ರ್ಯ ಹೊರಟು ಹೋಯಿತು. ಹಳ್ಳಿಯಿಂದ ಬರಹಗಾರರನ್ನು ಗುರುತಿಸಿ ಕೃಷಿ ಲೇಖನ ಪ್ರಕಟಿಸುವ ಕಲ್ಪನೆ ದೊಡ್ಡ ಪತ್ರಿಕೆಗಳಿಗೂ ಇಲ್ಲ. ಇವರು ತಮ್ಮ ಕೃಷಿ-ಲೇಖನಗಳ ಅವಶ್ಯಕತೆಗಳಿಗಾಗಿ, ಎಂದೂ ಕೃಷಿ ಮಾಡದ ಕೃಷಿ ವಿಜ್ಞಾನಿಗಳನ್ನು ನೆಚ್ಚಿಕೊಳ್ಳುತ್ತಾರೆ. ಕೃಷಿಕ ನಾಲ್ಕೂ ದಿಕ್ಕುಗಳಿಂದ ಶೋಷಣೆಗೊಳಗಾಗುತ್ತಿದ್ದಾನೆ. ಲೇಖನಿ ಕೃಷಿಕನ ಆತ್ಮರಕ್ಷಣೆಯ ಖಡ್ಗವಾಗಬೇಕು, ಉನ್ನತಿಯ ನೇಗಿಲಾಗಬೇಕು" ಎಂದು 'ಸುಧಾ' ವಾರ ಪತ್ರಿಕೆಯ ಫೀಚರ್ ಬರಹಗಾರ ನಾಗೇಶ್ ಹೆಗಡೆ ಆಶಿಸಿದರು.

ಅವರು ಶಿರಸಿ ಬಳಿಯ ಭೈರುಂಬೆ ಸಹಕಾರಿ ಸಂಘದಲ್ಲಿ ಇತ್ತೀಚೆಗೆ ಅಡಿಕೆ ಪತ್ರಿಕೆ ಸಂಘಟಿಸಿದ 'ಕೃಷಿಕರ ಕೈಗೆ ಲೇಖನಿ' ಉದ್ದೇಶದ "ಕೃಷಿ ಮತ್ತು ಗ್ರಾಮೀಣ ಪತ್ರಿಕೋದ್ಯಮ ತರಬೇತಿ ಶಿಬಿರ-೩" ಇದರ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿ ಎಂ ಹೆಗಡೆ ಹುಳಗೋಳ ಅವರು ಮಾತನಾಡುತ್ತ, "ಸ್ವಾತಂತ್ರ್ಯ ಬಂದಾಗ ಉದ್ಯಮಕ್ಕೆ ಬದಲು ಕೃಷಿಗೆ ಒತ್ತು ಕೊಟ್ಟಿದ್ದರೆ ಚೀನಾ ದೇಶದಲ್ಲಾದಂತೆ ಕೃಷಿ ಮತ್ತು ಕೃಷಿಕನ ಅಭಿವೃದ್ಧಿಯನ್ನೂ ಇಲ್ಲಿಯೂ ಸಾಧಿಸಬಹುದಾಗಿತ್ತು. ಇದಕ್ಕೆ ಬದಲು ಆಗ ವಿಜ್ಞಾನ ಮತ್ತು ತಾಂತ್ರಿಕತೆಗೆ ಒತ್ತು ಕೊಟ್ಟ ನಾವು ಇಷ್ಟು ವರ್ಷಗಳ ನಂತರವೂ ಸಹ ಈ ರಂಗದಲ್ಲಿ 'ಜ್ಞಾನ'ವನ್ನು ಬಹುರಾಷ್ಟ್ರೀಯ ಕಂಪೆನಿಗಳಿಂದ ಎರವಲು ಪಡೆಯಬೇಕಾಗಿದೆ" ಎಂದು ವಿವರಿಸಿದರು.

೪ ದಿನಗಳ ಈ ಶಿಬಿರವನ್ನು ಉದ್ಘಾಟಿಸಿದ ಧಾರವಾಡ ಕೃಷಿ ವಿ. ವಿ. ನಿವೃತ್ತ ಪ್ರಾಧ್ಯಾಪಕ ಡಾ|| ಎಲ್.ವಿ. ದೀಕ್ಷಿತ್‌ರವರು, ವೈಯಕ್ತಿಕ ಪ್ರಸಿದ್ಧಿಗಾಗಿ ಲೇಖನ ಬರೆಯುವುದು— (೪ನೇ ಪುಟಕ್ಕೆ)

ಒಂದು ವಿವಾದ

ಡಿ. ೧೧, ೧೨ ರಂದು ಶೆಟ್ಟಿಕೊಪ್ಪದಲ್ಲಿ ನಡೆದಿದ್ದೇನು?

[ಕಳೆದ ಡಿ. ೧೧ ಮತ್ತು ೧೨ ರಂದು ನ. ರಾ. ಪುರ ತಾ॥ ಶೆಟ್ಟಿಕೊಪ್ಪದಲ್ಲಿ ನಡೆದ ಯುವಜನ ಮೇಳದ ವೇಳೆ ಗಲಭೆಯಾಗಿ ಸಬ್‌ಇನ್‌ಸ್ಪೆಕ್ಟರಿಗೆ ಪೆಟ್ಟಾಗಿತ್ತು. ಈ ಬಗೆಗಿನ ಪೋಲೀಸ್ ಅಧಿಕೃತ ವರದಿಯನ್ನು ಅಲ್ಲಗಳೆದು, ಅಂದಿನ ಘಟನೆಯ ವಿವರ ನೀಡಿರುವ ತಾಲ್ಲೂಕಿನ ವಿವಿಧ ಮಹಿಳಾ ಮತ್ತು ಯುವ ಸಂಘಟನೆಗಳವರು ಹಾಗೂ ಶೆಟ್ಟಿಕೊಪ್ಪದ ನಾಗರಿಕರು ಪ್ರತ್ಯೇಕವಾದ ಹೇಳಿಕೆಗಳನ್ನು ಕಳಿಸಿದ್ದಾರೆ. ಹಾಗೆಯೇ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳಿಗೂ ಇತರ ಮೇಲಧಿಕಾರಿಗಳಿಗೂ ದೂರು ನೀಡಿದ್ದಾರೆ.

ಈ ವಿವಾದ ಈಗಾಗಲೇ ಸಾಕಷ್ಟು ಹಳತಾಗಿದ್ದು, ಈ ಹೇಳಿಕೆಗಳು ಈಚೆಗಷ್ಟೇ ನಮಗೆ ತಲುಪಿದ್ದರೂ, ಮೇಲೆ ತಿಳಿಸಿದಂಥ 'ಅಧಿಕೃತ ವರದಿ' ನಮ್ಮಲ್ಲೂ ಪ್ರಕಟವಾಗಿದ್ದರಿಂದ ಸಾರ್ವಜನಿಕರ ಈ ಹೇಳಿಕೆಗಳ ಸಾರಾಂಶವನ್ನಿಲ್ಲಿ ಪ್ರಕಟಿಸುತ್ತಿದ್ದೇವೆ.

ಹೇಳಿಕೆಗಳಿಗೆ ತಾ॥ ಯುವ ಮಹಿಳಾ ಒಕ್ಕೂಟ. ತಾ॥ ಮಹಿಳಾ ಮಂಡಳಿ, ೧೨ ಮಹಿಳಾ ಸಂಘಟನೆಗಳು ಹಾಗೂ ಸುಮಾರು ೫೦ ಜನ ನಾಗರಿಕರು ಸಹಿ ಮಾಡಿದ್ದಾರೆ. —ಸಂ.]

ನ.ರಾ. ಪುರ ತಾ॥ ಮಟ್ಟದ ಯುವಜನ ಮೇಳ ಶೆಟ್ಟಿಕೊಪ್ಪದಲ್ಲಿ ಡಿ. ೧೧, ೧೨ರಂದು ನಡೆದಾಗ ಸುತ್ತಮುತ್ತಲ ಊರುಗಳಿಂದೆಲ್ಲ ದೇಣಿಗೆ ಮತ್ತಿತರ ಎಲ್ಲಾ ರೀತಿಯ ಸಹಕಾರವನ್ನೂ ಜನತೆ ನೀಡಿದ್ದರು. ಅಂತೆಯೇ ಕಾರ್ಯಕ್ರಮಗಳಲ್ಲೂ ಮೇಲು-ಕೀಳು, ಬಡವ-ಶ್ರೀಮಂತರೆನ್ನದೆ ನೂರಾರು ಜನ ಸೇರಿ ಕಾರ್ಯಕ್ರಮ ಸವಿಯುತ್ತಿದ್ದರು.

ಡಿ. ೧೧ರಂದು ರಾತ್ರಿ ಸುಮಾರು ೯.೩೦ರ ಹೊತ್ತಿಗೆ ಶ್ಯಾಮಾನಾಯಕ್ ಎಂಬ ದಫೇದಾರ್, ಇಬ್ಬರು ಮಹಿಳಾ ಪೋಲೀಸರೊಂದಿಗೆ ಸತೀಶ್ಚಂದ್ರ ಕಂಪೆನಿಯ ಜೀಪಿನಲ್ಲಿ ಬಂದ ಸಬ್‌ಇನ್‌ಸ್ಪೆಕ್ಟರ್ ಮಂಜುನಾಥಯ್ಯ ಸ್ವಲ್ಪ ಹೊತ್ತಿನ ನಂತರ ಹತ್ತಿರದಲ್ಲೇ ಇರುವ ನ.ರಾ. ಪುರದ ಛತ್ರದ ವ್ಯಾಪಾರಿಯೊಬ್ಬರ ತೋಟಕ್ಕೆ ಇವರೆಲ್ಲರೊಂದಿಗೆ ಹೋಗಿ, ಸಾಕಷ್ಟು ಸಮಯದ ನಂತರ ಪಾನಮತ್ತರಾಗಿ ವಾಪಸು ಬಂದರು. ಅನಂತರ ಸ್ವಲ್ಪ ಹೊತ್ತು ಆಚೀಚೆ ಜೀಪಿನಲ್ಲಿ ಓಡಾಡಿ, ಇಬ್ಬರು ಮಹಿಳಾ ಪೋಲೀಸರ ಹೊರತು ಮಿಕ್ಕವರನ್ನೆಲ್ಲ ಇಳಿಸಿ, ರಸ್ತೆಯ ಪಕ್ಕ ಸ್ವಲ್ಪ ಕತ್ತಲಿನಲ್ಲಿ ಜೀಪು ನಿಲ್ಲಿಸಿಕೊಂಡು ಕುಳಿತಿದ್ದರು.

ಇತ್ತ ಯಾವ ಗಲಾಟೆಯಿಲ್ಲದೆ ಕಾರ್ಯಕ್ರಮ ನಡೆಯುತ್ತಿದ್ದಾಗ, ಅಪರಾತ್ರಿಯಲ್ಲಿ ರಂಗ ಮಂಟಪದ ಮೇಲೆ ಹಾದು ಹೋಗಿದ್ದ ಪ್ರೈಮರಿ ವಿದ್ಯುತ್ ತಂತಿಯಲ್ಲಿ ಬೆಂಕಿ ಕಾಣಿಸಿಕೊಂಡು, ನೋಡನೋಡುತ್ತಿದ್ದಂತೆಯೇ ತಂತಿ ತುಂಡಾಗಿ ಕೆಳಗೆ ಬಿತ್ತು. ಇದರಿಂದ ಕಾರ್ಯಕ್ರಮ ನೋಡುತ್ತ ಕುಳಿತಿದ್ದ ಹುಡುಗಿಯೊಬ್ಬಳಿಗೆ ತೀವ್ರ ವಿದ್ಯುತ್ ಶಾಕ್ ತಗುಲಿ ಆಕೆ ಪ್ರಜ್ಞೆ ತಪ್ಪಿದಳು.

ಸುತ್ತೆಲ್ಲ ತುಂಬಾ ಕತ್ತಲಾವರಿಸಿತು. ಹೆಂಗಸರು, ಮಕ್ಕಳು ಭಯದಿಂದ ಅತ್ತಿತ್ತ ಓಡತೊಡಗಿದರು. ಆದರೂ ಬೇಗನೆ ಪೆಟ್ರೋಮ್ಯಾಕ್ಸ್ ದೀಪ ಹೊತ್ತಿಸಿ, ಆ ಹುಡುಗಿಗೆ ಸ್ಥಳೀಯ ಹೋಲಿ ಕ್ರಾಸ್ ಡಿಸ್ಪೆನ್ಸರಿಯಲ್ಲಿ ಪ್ರಥಮ ಚಿಕಿತ್ಸೆ ನೀಡಿದರೂ ಪ್ರಜ್ಞೆ ಬರಲಿಲ್ಲ. ಆಕೆಯನ್ನು ಕೂಡಲೇ ನ. ರಾ. ಪುರಕ್ಕೆ ಚಿಕಿತ್ಸೆಗಾಗಿ ಒಯ್ಯಲು ಹಲವು ಯುವಕರು ಪ್ರಯತ್ನಿಸಿ, ಯಾವುದೂ ವಾಹನ ಸಿಗದೆ. ಸಬ್ ಇನ್‌ಸ್ಪೆಕ್ಟರ್ ಇದ್ದ ಜೀಪನ್ನು ಕೇಳಲು ಹೋದರು.

ಜೀಪಿನ ಮುಂದಿನ ಸೀಟಿನಲ್ಲಿ ಒಬ್ಬ ಮಹಿಳಾ ಪೋಲೀಸರೊಂದಿಗೆ ಸುಖದಲ್ಲಿದ್ದ ಎಸ್ಸೈ. ಅವಾಚ್ಯವಾಗಿ ನಿಂದಿಸಿ, ಜೀಪು ಕೊಡಲು ನಿರಾಕರಿಸಿದರು. ಹಾಗೂ ಕೂಡಲೇ ಜೀಪಿನೊಂದಿಗೆ ನ. ರಾ. ಪುರಕ್ಕೆ ಹೋಗಿ, ಸುಮಾರು ೧ ಗಂಟೆಯ ನಂತರ ಇಬ್ಬರು ಲೈನ್‌ಮ್ಯಾನ್‌ಗಳನ್ನೂ ಕರೆದುಕೊಂಡು ಬಂದರು. ಆಗ ಅವರಿಗೂ ಉದ್ರಿಕ್ತ ಯುವಕರಿಗೂ ಮಾತಿನ ಚಕಮಕಿ ನಡೆಯಿತು.

ಆ ಹಂತದಲ್ಲಿ ಯಾರೋ ಪೆಟ್ರೋಮ್ಯಾಕ್ಸ್ ಆರಿಸಿ, ಟಾರ್ಚ್‌ನಿಂದ ಎಸ್ಸೈಯ ತಲೆಗೆ ಹೊಡೆದಿದ್ದು, ಪುನಃ ಪೆಟ್ರೋಮ್ಯಾಕ್ಸ್ ಹಚ್ಚಿದಾಗ ಗೊತ್ತಾಯಿತು. ಆದರೆ ಹೊಡೆದವರಾರೆಂದು ತಿಳಿಯಲಿಲ್ಲ ಅಂತೂ ಆ ಹುಡುಗಿಗೆ ಸ್ಥಳೀಯರೇ ಹೇಗೋ ಪ್ರಯತ್ನಪಟ್ಟು ಪ್ರಜ್ಞೆ ಬರಿಸಬೇಕಾಯಿತು ಹೊರತು, ಆಕೆಯ ಜೀವವುಳಿಸುವ ಸಲುವಾಗಿ ಎಸ್ಸೈ ಜೀಪು ಕೊಡಲಿಲ್ಲವೆಂಬುದು ಗಮನಾರ್ಹ.

(ಮುಂದಿನ ಪುಟಕ್ಕೆ)

ಸಂಕ್ರಾಂತಿಯ 'ಶುಭಾಶಯ' !?

ಹೊಸ ವರ್ಷದ 'ಹೊಸ ದಿನಗಳು' ಸಂಕ್ರಾಂತಿಯ ಕ್ರಾಂತಿ
ನಸು ಹರ್ಷದ ಹೊಸ ಆಶಯ ಹಾರೈಕೆ ಉತ್ಕ್ರಾಂತಿ
ಹಲ್ಕಿರಿಯುತ ಕೈ ಬೀಸುತ ತೋರುವ ಹೊರೆ 'ಸಂತಸ'
ಕಾವೇರುತ, ಕಾವೇರುತ ಹೊತ್ತುರಿಯುತಲಿಹುದೆಲ್ಲರ— ಒಡಲು ತಹತಹ

ಒಳಗೊಳಗೆಯೆ ಮಸೆಯುತ್ತಿದೆ ಕರಿಗುಬ್ಬೆಯ ಕಿಡಿ,
ಆ ಅದೋ ಅವ ಓ ಇದೋ ಇವ ಕತ್ತಿ ಕಟ್ಟಿದ್ದಾರೆ
ಅಲ್ಲಿ ಕಾಯುತ್ತಿದ್ದಾರೆ ಮಕ್ಕಳು 'ಹಿರಿಯಮ್ಮ'ನಿಗಾಗಿ
ಜೀವ ಬಿಗಿ ಹಿಡಿದು ಆ ಕ್ಷಣವೊ ಈ ಕ್ಷಣವೊ—ಋಣ ಸಂದಾಯಕ್ಕಾಗಿ

ಇಲ್ಲಿ ಬೆನ್ನು ಬಾಗಿದ ಜೋಲು ಮೋರೆಯ ಅಮ್ಮ
ಎದೆ ಕರಗಿಸಿಕೊಂಡಿದ್ದಾಳೆ. ಕಣ್ಣು ಕೋಳಯಿಸುತ್ತಿದ್ದಾಳೆ.
ಬತ್ತಿದ್ದ ನಾಲೆಯಲಿ ನೀರ ತೊರೆ ಹರಿದು ಬಿಡುತ್ತಿದ್ದಾಳೆ
ಅಲ್ಲಿ ಇಲ್ಲಿ ಎಲ್ಲೆಲ್ಲು ಮೌನ, ಎಲ್ಲ—
ಕಣ್ಬಿಚ್ಚಿ ತುಟಿಮುಚ್ಚಿ ಕಾತರದಿ ಕಾಯುತ್ತಿದ್ದಾರೆ
ಆ ಮಕ್ಕಳು ಈ ತಾಯಂದಿರಿಗೆಲ್ಲ ನಾವು ನೀವು
ಸೇರಿ ಹೇಳೋಣವೆ ಹೊಸ ವರ್ಷದ ಸಂಕ್ರಾಂತಿಯ
ಶುಭಾಶಯ (?!)

—ಟಿ ಎಲ್. ಉಮೇಶ್.

ಕಷ್ಟಪಟ್ಟರೇ ಫಲ

(೬-೧-೧೯೯೧ರ ಸಂಚಿಕೆಯಿಂದ)

ಆ ಬಡವನು ತನ್ನ ಸಾಹುಕಾರನ ಮನೆಯಲ್ಲೇ ಕೆಲಸಕ್ಕೆ ಸೇರಿಕೊಳ್ಳಬಹುದೆಂದೂ, ಅವರು ತುಂಬ ಒಳ್ಳೆಯವರೆಂದೂ ತಿಳಿಸಿದನು. ತಾನೇ ವಿಚಾರಿಸಿ ಬಂದು ತಿಳಿಸಿದನು. ಆ ಸಾಹುಕಾರನ ಮನೆಯಲ್ಲಿ ಕೆಲಸ ಮಾಡಿಕೊಂಡು, ಅಲ್ಲೇ ಪಕ್ಕದಲ್ಲಿ ಅವರದೊಂದು ಕೋಣೆಯಲ್ಲಿ ವಾಸ ಮಾಡಿಕೊಂಡು ರಾಜು, ಅವನ ತಾಯಿ ಇರತೊಡಗಿದರು.

ನಾಲ್ಕೈದು ದಿನ ಕಳೆದ ಮೇಲೆ ತಾಯಿ ಸಾಹುಕಾರನ ಹತ್ತಿರ ರಾಜುವಿನ ವಿದ್ಯಾಭ್ಯಾಸದ ಸಂಗತಿ ತಿಳಿಸಿ, ೩೦೦ ರೂಪಾಯಿ ಕೇಳಿದಳು. ಅವನು ನಿರ್ದಾಕ್ಷಿಣ್ಯವಾಗಿ ತೆಗೆದು ಕೊಟ್ಟನು. ರಾಜುವಿಗೆ ಹೊಸ ಬಟ್ಟೆ, ಪುಸ್ತಕ, ಚೀಲ, ಪೆನ್ನು ಮುಂತಾದುವನ್ನೆಲ್ಲ ತೆಗೆಸಿಕೊಟ್ಟು, ಹೈಸ್ಕೂಲಿಗೆ ಸೇರಿಸಿದಳು. ಒಂದೆರಡು ತಿಂಗಳಲ್ಲಿ ಸಾಹುಕಾರನ ಸಾಲವನ್ನೂ ತೀರಿಸಿದಳು.

ರಾಜು ಮೆರಿಟ್ ಪರೀಕ್ಷೆಗೂ ಕಟ್ಟಿ ಪಾಸಾದನು. ಇದರಿಂದ ಅವನಿಗೆ ವಿದ್ಯಾಭ್ಯಾಸಕ್ಕೆ ಆಗುವಷ್ಟು ಹಣ ಬರತೊಡಗಿತು. ಗಂಡು ಮಕ್ಕಳಿಲ್ಲದ ಸಾಹುಕಾರನಿಗೂ ರಾಜುವೆಂದರೆ ಇಷ್ಟ. ಹೀಗಾಗಿ ಅವನೂ ರಾಜುವಿನ ವಿದ್ಯಾಭ್ಯಾಸಕ್ಕೆ ನೆರವಾಗುತ್ತ ಬಂದನು ರಾಜು ರಜೆಯಲ್ಲಿ ತಾನೂ ಸಾಹುಕಾರನ ಮನೆಯಲ್ಲಿ ಕೆಲಸ ಮಾಡಿ, ಅವನಿಗೆ ನೆರವಾಗುತ್ತಿದ್ದನು.

ಹೀಗೆ ಕಷ್ಟಪಟ್ಟು ಓದಿ ಅವನು ಡಾಕ್ಟರ್ ಆದನು. ಕೆಲವೇ ಸಮಯದಲ್ಲಿ ಉತ್ತಮ ಡಾಕ್ಟರೆಂದು ಸುತ್ತಮುತ್ತಲೆಲ್ಲ ಖ್ಯಾತಿ ಗಳಿಸಿದನು.

ಒಂದು ದಿನ ಅವನ ಆಸ್ಪತ್ರೆಗೆ ತೀವ್ರ ಕಾಯಿಲೆಯಿಂದ ನರಳುತ್ತಿದ್ದ ಮುದುಕನೊಬ್ಬನನ್ನು ಅವನ ಮಗ ಕರೆತಂದನು. ಅವನ ಹೆಸರು ಬರೆದುಕೊಳ್ಳುವಾಗ ಅವನು ತನ್ನ ತಂದೆಯ ಧಣಿ ಎಂದೂ, ಕರೆತಂದವನು ಗೋಪುವೆಂದೂ ತಿಳಿಯಿತು.

ಆಗ ಅವರಿಗೆ ತನ್ನ ಗುರುತು ಹೇಳಿ, ಹಿಂದೆ ತನ್ನ ವಿದ್ಯಾಭ್ಯಾಸಕ್ಕೆ ಅವರು ಅಡ್ಡಿ ಬಂದುದನ್ನೂ ಜ್ಞಾಪಿಸಿದನು ರಾಜು. ಆದರೂ ತಾನು ಅದನ್ನೆಲ್ಲ ಮರೆಯುವುದಾಗಿ ತಿಳಿಸಿ, ಚೆನ್ನಾಗಿ ಚಿಕಿತ್ಸೆ ಮಾಡಿದನು. ಕೆಲವು ದಿನಗಳಲ್ಲಿ ಕಾಯಿಲೆ ವಾಸಿಯಾಯಿತು ಗೋಪುವಿಗೂ ಅವನ ತಂದೆಗೂ ತುಂಬಾ ನಾಚಿಕೆ, ಪಶ್ಚಾತ್ತಾಪ ಉಂಟಾಯಿತು.


ರಾಜುವಿನ ಉಪಕಾರಕ್ಕೆ ಪ್ರತಿಯಾಗಿ ಏನಾದರೂ ಪ್ರತ್ಯುಪಕಾರ ಮಾಡುವೆನೆಂದರೆ ರಾಜು ಏನೂ ಬೇಡವೆಂದನು. ಸಾಹುಕಾರನು ಬಿಡದೆ ರಾಜುವಿನ ತಾಯಿಯನ್ನು ಕಂಡು ತನ್ನ ಸಂಗತಿಯನ್ನೆಲ್ಲ ತಿಳಿಸಿದನು. ರಾಮಪ್ಪನನ್ನು ಅವರು ಜಗಳವಾಡಿ ಎಂದೋ ಓಡಿಸಿಬಿಟ್ಟಿದ್ದರು. "ಉಪಕಾರ ಮಾಡುವುದಾದರೆ ನನ್ನ ಗಂಡನನ್ನು ಹುಡುಕಿ ಕೊಡಿ" ಎಂದು ರಾಜುವಿನ ತಾಯಿ ಕೇಳಿದ್ದಕ್ಕೆ ಸಾಹುಕಾರ ಒಪ್ಪಿಕೊಂಡನು.

ಅದರಂತೆ ಕಷ್ಟಪಟ್ಟು ರಾಮಪ್ಪನನ್ನು ಹುಡುಕಿದರು. ಗೋಪುವಿನ ತಂಗಿಯನ್ನು ರಾಜುವಿನ ಹೆಂಡತಿಯಾಗಿ ಮಾಡಿಕೊಳ್ಳಲು ಅವನ ತಾಯಿಯನ್ನು ಸಾಹುಕಾರನು ಒಪ್ಪಿಸಿದನು. ಶೀಘ್ರದಲ್ಲೇ ಮದುವೆಯೂ ನಡೆದು ಹೋಯಿತು. ರಾಜು-ಗೋಪು ಪುನಃ ಸ್ನೇಹಿತರಾದರು.

ರಾಜು ತನ್ನ ಮಡದಿ ಮತ್ತು ತಾಯಿ ತಂದೆಗಳೊಂದಿಗೆ ತಮಗೆ ಆಶ್ರಯ ನೀಡಿದ್ದ ಸಾಹುಕಾರನ ಮನೆಗೆ ಬಂದು ಎಲ್ಲರನ್ನೂ ಪಂಚಯಿಸಿದನು. ಸಾಹುಕಾರನು ವೃದ್ಧನಾಗಿದ್ದುದರಿಂದ ರಾಜುವಿನ ಕುಟುಂಬದವರನ್ನೆಲ್ಲ ತನ್ನ ಮನೆಯಲ್ಲೇ ಉಳಿಸಿಕೊಂಡನು.

"ಕಷ್ಟಪಟ್ಟರೇ ಫಲ, ಸೊಂಟ ಬಗ್ಗಿದರೇ ಕೂಳು, ನಿಷ್ಠೆಯಿಂದ ನಡೆದರೆ ಭೋಗವದು ನಿಶ್ಚಯ" ಎಂಬ ಮಾತನ್ನು ರಾಜು ಸದಾ ನೆನಪಿನಲ್ಲಿಟ್ಟುಕೊಂಡು ಅದರಂತೆ ನಡೆದು ಸುಖವಾಗಿ ಬಾಳಿದನು.

—ಹ ವೆಂ. ಬಿಂದು,
೭ನೇ ತರಗತಿ, ನಾರ್ವೆ.



ನಮ್ಮನೆ ಬೆಕ್ಕು

ಬೆಕ್ಕೇ ಬೆಕ್ಕೇ
ಕಪ್ಪು ಪಟ್ಟಿಯ
ಬಿಳಿಯ ಬೆಕ್ಕೇ
ಮುದ್ದಿನ ಬೆಕ್ಕೇ
ನನ್ನಯ ಬೆಕ್ಕೇ
ಹಾಲನು ಕದಿಯುವ ಬೆಕ್ಕೇ
ಇಲಿಯನು ಹಿಡಿಯುವ ಬೆಕ್ಕೇ
ಮೆಲ್ಲ ಮೆಲ್ಲನೆ
ಹೋಗುವ ಬೆಕ್ಕೇ
ನಾಯಿಯ ಕಂಡರೆ
ಓಡುವ ಬೆಕ್ಕೇ
ಬೆಕ್ಕೇ ಬೆಕ್ಕೇ
ನಮ್ಮನೆ ಬೆಕ್ಕೇ

—ಎಂ ಎ ಅಲಂಪು,
೫ ನೇ ತರಗತಿ, ಶಿವಮೊಗ್ಗ.

ಕನ್ನಡ ಅಂಕಿಗಳನ್ನೇ ಬಳಸಿ
೦ ೧ ೨ ೩ ೪ ೫ ೬ ೭ ೮ ೯

ರಾಜಧಾನಿಯಲ್ಲಿ ಮಲೆನಾಡಿನ ಕಂಪು ಬೀರಿದ 'ಸಹ್ಯಾದ್ರಿ ಸಮ್ಮಿಲನ'

ಬೆಂಗಳೂರಿನಲ್ಲಿರುವ ಸಹ್ಯಾದ್ರಿ ಸಂಘದ
ಆಶ್ರಯದಲ್ಲಿ, ದಿನಾಂಕ ೩೦-೧೨-೯೦
ರಂದು ನಡೆದ ಸ್ನೇಹ ಸಮ್ಮಿಲನ ಕಾರ್ಯ
ಕ್ರಮ, ರಾಜಧಾನಿಯಲ್ಲಿನ ಮಲೆನಾಡ
ಮಿತ್ರರಿಗೆ ಒಂದು ಅಪೂರ್ವ ಸನ್ನಿವೇಶ.
ಜಾತಿ, ಮತ, ವರ್ಗ ಭೇದವಿಲ್ಲದೆ ಎಲ್ಲರೂ
ಒಂದೆಡೆ ಕಲೆತು, ಪರಸ್ಪರ ಪರಿಚಯಿಸಿ
ಕೊಂಡು, ವಿಚಾರ ವಿನಿಮಯದ ಜೊತೆ
ಮನರಂಜನಾ ಕಾರ್ಯಕ್ರಮಗಳನ್ನೂ ನಡೆ
ಸಿದರು.

ಅಂದು ಮಧ್ಯಾಹ್ನ ನಡೆದ ವಿಚಾರ
ಗೋಷ್ಠಿಯಲ್ಲಿ 'ಶತಮಾನದ ಹೊಸ್ತಿಲಿನಲ್ಲಿ
ಸಾಕ್ಷರತೆಗಾಗಿ ಒಂದು ವೈಚಾರಿಕ ಕ್ರಾಂತಿ–
ಮಲೆನಾಡಿನ ಉದ್ಯೋಗಸ್ಥ ಶಿಕ್ಷಿತರ
ಜೊಡಣೆ' ಎಂಬ ವಿಚಾರದ ಬಗ್ಗೆ, ಬೆಂಗ
ಳೂರು ವಿಶ್ವವಿದ್ಯಾಲಯದ ಪ್ರೊ|| ಎಚ್.
ಎಸ್. ಈಶ್ವರ್ ಮತ್ತು ಡಾ|| ಶಿವಪ್ಪ
ಇವರಿಂದ ಉಪನ್ಯಾಸ, ನಂತರ ಈ ವಿಷ
ಯದ ಬಗ್ಗೆ ಪ್ರಶ್ನೋತ್ತರ ಮತ್ತು ಚರ್ಚೆ
ನಡೆಯಿತು ಡಾ| ಎಚ್. ಎಸ್. ಈಶ್ವರ್
ರವರು, ಮಲೆನಾಡಿನ ಶಿಕ್ಷಿತ ಉದ್ಯೋಗ
ಸ್ಥರು ಮಾನವೀಯತೆಯ ಮೌಲ್ಯಗಳನ್ನು
ಎತ್ತಿ ಹಿಡಿದು, ಮಲೆನಾಡಿನ ಉತ್ತಮ
ವ್ಯಕ್ತಿಗಳ ಆದರ್ಶವನ್ನು ಪಾಲಿಸಿದಾಗ,
ವರದಕ್ಷಿಣೆ, ಲಂಚಗುಳಿತನ, ಮತ್ಸರ ಇವು
ಗಳ ವಿರುದ್ಧ ಹೋರಾಡಿದಾಗ ಮಾತ್ರ,
ಮಲೆನಾಡು ನೈಜ ಸ್ವರೂಪದ ಸಾಕ್ಷರತೆ
ಯನ್ನು ಪಡೆಯಲು ಸಾಧ್ಯ ಎಂದರು.
ನಂತರ ಮಾತನಾಡಿದ ಡಾ|| ಶಿವಪ್ಪ.
ವಿಚಾರ ಸಂಕಿರಣದ ವಸ್ತುಸ್ಥಿತಿಯನ್ನು
ವಿವರಿಸಿ, ಇಂದಿನ ಶಿಕ್ಷಿತ ಜನ ಅಶಿಕ್ಷಿತ
ರನ್ನು ಶಿಕ್ಷಿತರನ್ನಾಗಿ ಮಾಡುವಲ್ಲಿ ಶ್ರಮಿಸ
ಬೇಕೆಂದು ಕರೆ ಇತ್ತರು. ಬಂದಗಡ್ಡೆ ರಮೇ
ಶ್ ಅಧ್ಯಕ್ಷತೆ ವಹಿಸಿದ್ದರು

ಸಂಜೆ ನಡೆದ ಅಭಿನಂದನಾ ಸಮಾರಂಭ
ದಲ್ಲಿ, ಮಲೆನಾಡಿನ ಆಯ್ದ ಗಣ್ಯ ವ್ಯಕ್ತಿ
ಗಳನ್ನು ಸಂಘ ಸನ್ಮಾನಿಸಿತು. ಸಾರ್ವ
ಜನಿಕ ಕ್ಷೇತ್ರದಿಂದ ಕಡಿದಾಳ್ ಮಂಜಪ್ಪ,
ಶಿಕ್ಷಣ ಕ್ಷೇತ್ರದಲ್ಲಿ ಬಹುಭಾಷಾ ಪಂಡಿತ
ಡಾ|| ಭಾರತೀರಮಣಾಚಾರ್, ಸಾಂಸ್ಕೃ
ತಿಕ ಕ್ಷೇತ್ರದಲ್ಲಿ ಶಿವಮೊಗ್ಗ ಸುಬ್ಬಣ್ಣ,
ಬಿ. ಕೆ. ಸುಮಿತ್ರ ಮತ್ತು ಕ್ರೀಡಾ ಕ್ಷೇತ್ರ
ದಿಂದ ಎಸ್. ಡಿ. ಈಶನ್ ರವರನ್ನು ಅಧ್ಯ
ಕ್ಷತೆ ವಹಿಸಿದ್ದ ನ್ಯಾಯಾಧೀಶ ರಾಮ
ಜೋಯಿಸ್‌ರವರು, ಶಾಲು ಹೊದಿಸಿ ಗೌರ
ವಿಸಿದರು ಮತ್ತು ಈ ವ್ಯಕ್ತಿಗಳ ಯಶಸ್ಸಿನ
ಮಾರ್ಗವನ್ನು ಅನುಸರಿಸಬೇಕೆಂದು ಕರೆ
ಇತ್ತರು.

ನಂತರ ನಡೆದ ಮನರಂಜನಾ ಕಾರ್ಯ
ಕ್ರಮದಲ್ಲಿ, ಶಿವಮೊಗ್ಗ ಸುಬ್ಬಣ್ಣ, ಬಿ. ಕೆ.
ಸುಮಿತ್ರ ಇವರ ಸುಗಮ ಸಂಗೀತ ಮತ್ತು
ಕು|| ಅನುಲೇಖಾರವರ ನೃತ್ಯ ಕಾರ್ಯ
ಕ್ರಮವನ್ನು ಏರ್ಪಡಿಸಲಾಗಿತ್ತು.

ಶೆಟ್ಟಿಕೊಪ್ಪದಲ್ಲಿ ನಡೆದಿದ್ದೇನು ?

(ಹಿಂದಿನ ಪುಟದಿಂದ)

ಹೀಗೆ, ತಮ್ಮ ಅಶ್ಲೀಲ ವರ್ತನೆಯಿಂದ
ಸಬ್ ಇನ್‌ಸ್ಪೆಕ್ಟರೇ ಗಲಾಟೆಗೆ ಕಾರಣರಾಗಿ
ದ್ದಲ್ಲದೆ, ಸ್ಪರ್ಧೆಗಳಿಗೆಂದು ತಾಲ್ಲೂಕಿನ
ಎಲ್ಲೆಡೆಯಿಂದ ಬಂದಿದ್ದ ಯುವತಿಯರೊಂದಿ
ಗೆ ಸಭ್ಯವಾಗಿ ವರ್ತಿಸಿದ ಯುವಕರ ಮೇಲೇ
ಆರೋಪ ಹೊರಿಸಿದ್ದಾರೆ–"ವಿದ್ಯುತ್ ಹೋ
ದಾಗ ಗ್ರೀನ ರೂಂಗೆ ನುಗ್ಗಿ ಯುವತಿಯರ
ಮಾನ ಭಂಗಕ್ಕೆ ಯತ್ನಿಸಿದರು" ಎಂದು!
ಆದರೆ ಅಂಥ ಯಾವ ಪ್ರಸಂಗವೂ ನಡೆಯ
ಲೆಲ್ಲವೆಂದು, ಪ್ರತ್ಯಕ್ಷದರ್ಶಿಗಳಾದ ಮಹಿ
ಳಾ ಸಂಘಟನೆಗಳವರೆಲ್ಲ ಸ್ಪಷ್ಟಪಡಿಸು
ತ್ತೇವೆ.

ನಮ್ಮ ಪ್ರಸಕ್ತ ಸಮಾಜದಲ್ಲಿ, ಗ್ರಾಮೀ
ಣ ಮಹಿಳೆಯರು ಮತ್ತು ಯುವತಿಯರು
ನಾಲ್ಕು ಗೋಡೆಗಳ ನಡುವೆಯೇ ನಶಿಸುತ್ತ
ಪ್ರತಿಭೆಯ ಅಭಿವ್ಯಕ್ತಿಗಾಗಲಿ, ಮನರಂಜನೆ
ಸವಿಯಲಿಕ್ಕಾಗಲಿ ಅವಕಾಶಗಳೇ ಇರದಂಥ
ಸ್ಥಿತಿಯಲ್ಲಿರುವಾಗ, ಸಿಕ್ಕ ಇಂಥ ಒಂದು
ಸದವಕಾಶವನ್ನೂ ಈ ರೀತಿ ಹಾಳುಗೆಡವಿ
ದ್ದಲ್ಲದೆ, ಯುವತಿಯರ ನಡವಳಿಕೆಗೇ ಶಂಕೆ
ಯ ಕಳಂಕ ತಟ್ಟಿಸುವ ಹೇಳಿಕೆಗಳನ್ನು
ಪ್ರಚುರಪಡಿಸಿದ ಸಬ್‌ಇನ್‌ಸ್ಪೆಕ್ಟರ್ ವರ್ತ
ನೆಗೆ ನಮ್ಮೆಲ್ಲರ ವಿಷಾದಪೂರಿತ ಧಿಕ್ಕಾರ
ವಿದೆ !

ಇದರಿಂದ ಗ್ರಾಮೀಣ ಮಹಿಳೆಯರನ್ನೂ
ಯುವತಿಯರನ್ನೂ ಇಂಥ ಯಾವುದೇ ಸ್ಪ
ರ್ಧೆಗಳಿಗೆ ಭಾಗವಹಿಸುವುದಕ್ಕಿರಲಿ, ಅವನ್ನು
ನೋಡಲು ಕಳಿಸುವುದಕ್ಕೂ ಸಹ ಇನ್ನು
ಎಷ್ಟೋ ವರ್ಷಗಳವರೆಗೆ ಅವರ ಹಿ
ಯರು ಹಿಂದೆಗೆಯುವುದರಲ್ಲಿ ಸಂಶಯವಿಲ್ಲ.

ಆದ್ದರಿಂದ ನಿರಪರಾಧಿ ಸ್ಥಳೀಯ ಯುವಕ
ರನ್ನು ಬಂಧಿಸಿ, ಭಯದ ವಾತಾವರಣ ನಿ
ರ್ಮಿಸಿರುವ ಸ್ಥಳೀಯ ಪೋಲೀಸ್ ಸಬ್
ಇನ್‌ಸ್ಪೆಕ್ಟರ್‌ರ ಬಗ್ಗೆ ಮತ್ತು ಇಡೀ ಪ್ರಕ
ರಣದ ಬಗ್ಗೆ ಹಿರಿಯ ಪೋಲೀಸ್ ಅಧಿಕಾರಿ
ಗಳು ನಿಷ್ಪಕ್ಷಪಾತವಾದ ತನಿಖೆ ನಡೆಸಿ,
ತಪ್ಪಿತಸ್ಥರಿಗೆ ಉಗ್ರವಾದ ಶಿಕ್ಷೆ ವಿಧಿಸಬೇಕೆಂ
ದು ನಾವೆಲ್ಲ ಒಕ್ಕೊರಲಿನಿಂದ ಒತ್ತಾಯಿಸು
ತ್ತೇವೆ.

—ತಾಲ್ಲೂಕು ಮಹಿಳಾ ಮಂಡಳಿ,
ತಾ|| ಯುವ ಮಹಿಳಾ ಒಕ್ಕೂಟ
ಮತ್ತು ಶೆಟ್ಟಿಕೊಪ್ಪ ನಾಗರಿಕರು,
ನ. ರಾ. ಪುರ ತಾಲ್ಲೂಕು.

ಕುಡಿವ ನೀರಿಗೆ ಪಲ್ಪರ್ ವಿಷ: ಕ್ರಮಕ್ಕೆ ಆಗ್ರಹ

ಜಯಪುರ : ಇಲ್ಲಿಗೆ ಸಮೀಪದ ಜಲ
ದುರ್ಗ ಮತ್ತು ಶಾಂತಿಪುರಗಳಿಗೆ ಕುಡಿವ
ನೀರು ಒದಗಿಸುವ ಜಲದುರ್ಗದ ಹಳ್ಳದಲ್ಲಿ
ಸಮೃದ್ಧವಾಗಿ ನೀರಿದ್ದರೂ, ಅದರ ಎರಡೂ
ಬದಿಯ ಕಾಫಿ ತೋಟಗಳ ಕೆಲ ಪಲ್ಪರ್
ಗಳಿಂದ ಕಾನೂನುಬಾಹಿರವಾಗಿ ಹಳ್ಳಕ್ಕೆ
ಬಿಡುವ ಕೊಳಚೆ ನೀರಿನಿಂದಾಗಿ ಡಿಸೆಂಬರ್
ನಿಂದಲೇ ನೀರು ಕುಡಿಯಲಾರದಂತೆ ಕಪ್ಪು
ಬಣ್ಣ ಮತ್ತು ದುರ್ವಾಸನೆಯಿಂದ ಕೂಡಿ
ರುತ್ತದೆ.

ಜಲದುರ್ಗದಲ್ಲಿ ಹಳ್ಳದ ಅಡ್ಡಗಟ್ಟೆ
ಕೇವಲ ೨ ವರ್ಷಗಳಲ್ಲೇ ಒಡೆದು ಪಂಪಿಗೆ
ನೀರು ಎಟುಕದಂತಾಗಿದೆ.

ಸಂಬಂಧಪಟ್ಟವರು ಕೂಡಲೇ ಈ ಎರ
ಡೂ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದ
ಗಿಸಬೇಕೆಂದು ಗ್ರಾಮಸ್ಥರ ಪರವಾಗಿ ಜಲ
ದುರ್ಗದ ಕೆ. ಎಂ ಖಾಸಿಂ ಒತ್ತಾಯಿಸಿ
ದ್ದಾರೆ.

ನಿವೇಶನ ವಿವಾದ: ನಾಗರಾಜರಾವ್ ಹೇಳಿಕೆ

ಕೊಪ್ಪ : ಇಲ್ಲಿನ ಮಂಡಲ ಪಂಚಾ
ಯ್ತಿಯ ಕಳೆದೆರಡು ಸಭೆಗಳಲ್ಲಿ ಪ್ರಸ್ತಾಪ
ವಾಗಿರುವ, ಬಸ್ ನಿಲ್ದಾಣದ ಬಳಿಯ
ನಿವೇಶನವೊಂದಕ್ಕೆ ೧೪ ವರ್ಷದ ನಂತರ
ಹಳೆಯ ದರದಲ್ಲೇ ಹಣ ಕಟ್ಟಿಸಿಕೊಂಡಿರು
ವುದನ್ನು ರದ್ದುಪಡಿಸಬೇಕೆಂಬ ಸದಸ್ಯರ
ಒತ್ತಾಯಕ್ಕೆ ಸಂಬಂಧಿಸಿದಂತೆ ಶಕ್ತಿ ಮೆಡಿ
ಕಲ್ಸ್‌ನ ಕೆ. ಎಸ್. ನಾಗರಾಜರಾವ್
ಈ ಕೆಳಗಿನ ಹೇಳಿಕೆ ನೀಡಿದ್ದಾರೆ —

"ನಿವೇಶನ ಮಂಜೂರಾಗಿ, ಹಣ
ಕಟ್ಟಲು ೨ನೇ ತಗಾದೆ ಬಂದಾಗಲೇ ಹಣ
ಕಟ್ಟಿದ್ದೆ. ಆದರೆ ತುರ್ತು ಪರಿಸ್ಥಿತಿ ಸಮಯ
ದಲ್ಲಿ ನಮ್ಮ ಮನೆ ಮೇಲೆ ಪೋಲೀಸ್
ದಾಳಿ ನಡೆದು ಹಲವು ದಾಖಲಾತಿಗಳು
ಎಲ್ಲೆಲ್ಲೋ ಕಳೆದು ಹೋದವು ಹಾಗಾಗಿ
ರಶೀದಿ ಉಳಿದಿಲ್ಲ. ಆಗ ಇದ್ದ ಪುರಸಭೆಯ
ಬಿಲ್ ಕಲೆಕ್ಟರ್ ಹಲವಾರು ಸಾವಿರ ರೂ.
ಗಳನ್ನು ನಕಲಿ ಬಿಲ್ ಹಾಕಿ ವಸೂಲಿ
ಮಾಡಿ ನುಂಗಿದ್ದು ಅನಂತರ ಅವಮಾನ
ತಾಗಿ, ಕೆಲಸ ಕಳೆದುಕೊಂಡ ನನ್ನ ಹಣ
ವನ್ನೂ ಬಹುಶಃ ಆತನೇ ನುಂಗಿರಬಹುದು;
ಆದ್ದರಿಂದಲೇ ಪುರಸಭೆಯ ದಾಖಲೆಯಲ್ಲಿ
ಹಣ ಪಾವತಿಯಾದ್ದು ಸೇರಿಲ್ಲದಿರಬಹುದು.

ಇವನ್ನು ಪ್ರಧಾನರಿಗೆ ವಿವರಿಸಿ ಹೇಳಿ
ದಾಗ ಅವರು ಒಪ್ಪಿ ಹೊಸದಾಗಿ ಹಣ
ಕಟ್ಟಲು ಹೇಳಿದ್ದೇ ಹೊರತು, ೨ ವರ್ಷ
ಅವಕಾಶ ಕೊಟ್ಟರೂ ತಾನು ಹಣ ಕಟ್ಟಿರ
ಲಿಲ್ಲ; ಈಗ ಹಳೇ ದರದಲ್ಲೇ ಕಟ್ಟಿದ್ದೇನೆ–
ಎಂಬುದು ಸತ್ಯವಲ್ಲ."

ಗಾದೆ ಸಂಗ್ರಹದಲ್ಲಿ ನೆರವಾಗಿ

ಇಂದು ಟಿ ವಿ., ವಿಡಿಯೋ, ಸಿನಿಮಾದ
ದ್ವಂದ್ವಾರ್ಥದ ಸಂಭಾಷಣೆಯ ಕ್ಯಾಸೆಟ್
ಗಳ ಹಾವಳಿಯಿಂದಾಗಿ, ಹಳ್ಳಿಗರ ಅನು
ಭವದಿಂದ ಹುಟ್ಟಿದ, ಜಾಣ್ಮೆಯನ್ನು
ಸ್ವಾರಸ್ಯವಾಗಿ ಸಂಕ್ಷಿಪ್ತವಾಗಿ ಹೇಳುತ್ತಿ
ದ್ದಂತಹ ಗಾದೆಗಳು ಮಾಯವಾಗುತ್ತಿವೆ.
**ಸಿನಿಮಾಗಳ ಸಂಭಾಷಣೆಗಳೇ ಹಳ್ಳಿ
ಗಳಲ್ಲಿ ಗಾದೆಗಳಾಗುವ ಮುನ್ನ**, ನಮ್ಮ
ಲ್ಲಿ ನೂರಾರು ವರ್ಷದಿಂದ ಬಳಕೆಯಲ್ಲಿದ್ದ
ಗಾದೆಗಳನ್ನು ಸಂಗ್ರಹಿಸಿ ಪ್ರಕಟಿಸಬೇ
ಕೆಂದು ಕೆಲ ಗೆಳೆಯರು ಯೋಚಿಸಿದ್ದೇವೆ.
ಈ ಸಂಗ್ರಹ ಕಾರ್ಯದಲ್ಲಿ ಓದು ಬರದ
ವರು, ಬರುವವರು ಎಲ್ಲರೂ ಸಹಕರಿಸಬೇ
ಕಾಗಿ ಕೋರುತ್ತೇವೆ.

ಸಿನಿಮಾ ಡೈಲಾಗ್‌ಗಳಲ್ಲದ, ಪುಸ್ತಕ
ಗಳಲ್ಲಿ ಬಳಕೆಯಾಗದ, ನವೀನ ನಾಟಕದ
ಸಂಭಾಷಣೆಗಳಲ್ಲದ, **ಹಳ್ಳಿಗಳಲ್ಲಿ ಬಳಕೆ
ಯಲ್ಲಿರುವ** ಅಥವ **ಜನರು ಜಗಳಾಡು
ವಾಗ, ಮಾತನಾಡುವಾಗ ಆಲಿಸಿ
ಕೊಂಡಂತಹ ಜನಬಳಕೆಯ** ತೆಲುಗು,
ಕನ್ನಡ ಭಾಷೆಗಳ ಗಾದೆಗಳನ್ನು (ಎಷ್ಟೇ
ತಮಾಷೆ ಅಥವಾ ಅಶ್ಲೀಲವಾದ್ದರೂ ಪರ
ವಾಗಿಲ್ಲ) ನಿಮ್ಮ ತಿದ್ದುಪಡಿಯಿಲ್ಲದೆ ಯಥಾ
ವತ್ತಾಗಿ ಬರೆದು ನಿಮ್ಮ ವಿಳಾಸದೊಡನೆ
ಕಳಿಸಬೇಕಾಗಿ ವಿನಂತಿ.

ಸಂಪರ್ಕಿಸುವ ವಿಳಾಸ :

ಜಿ ಜಯರಾಂ
ಚೈತ್ರ ಎಲೆಕ್ಟ್ರಾನಿಕ್ಸ್, ಮಿಡಿಗೇಶಿ,
ಮಧುಗಿರಿ ತಾ|| ತುಮಕೂರು ಜಿಲ್ಲೆ.

ರಾಷ್ಟ್ರೀಯ ಆಟೋಟಗಳಲ್ಲಿ ಬೆಳ್ಳಿ ಗೆದ್ದ ಕು|| ಮೀನಾಕ್ಷಿಗೆ ಅಭಿನಂದನೆ

ಚಿಕ್ಕಮಗಳೂರು ಜಿಲ್ಲೆಯಿಂದ ಏಕೈಕ
ಸ್ಪರ್ಧಾಳುವಾಗಿ ರಾಷ್ಟ್ರ ಮಟ್ಟದ ಕ್ರೀಡೆಗೆ
ಆಯ್ಕೆಯಾಗಿದ್ದ ಕೊಪ್ಪ ಸರ್ಕಾರಿ ಪದವಿ
ಪೂರ್ವ ಕಾಲೇಜಿನ ಕು| ಕೆ.ಎಂ.ಮೀನಾಕ್ಷಿ,
ಆಟೋಟಗಳಲ್ಲಿ **ರಾಜ್ಯದ ಏಕೈಕ ಬಹು
ಮಾನಿತ ಕ್ರೀಡಾಪಟುವಾಗಿ** ಜಾವೆ
ಲಿನ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗಳಿಸಿ
ದುದನ್ನು ಜನವರಿ ೭ ರ ಆಕಾಶವಾಣಿಯ
ಪ್ರದೇಶ ಸಮಾಚಾರದಲ್ಲಿ ಕೇಳಿ ಸಂತೋಷ
ವಾಯ್ತು.

ಈಕೆ ಉತ್ತಮ ತರಬೇತುದಾರರಿಂದ
ತರಬೇತು ಪಡೆದು ಜಾವೆಲಿನ್, ಗುಂಡೆ
ಸೆತ ಹಾಗೂ ಚಕ್ರದೆಸೆತದ ಸ್ಪರ್ಧೆಗಳಲ್ಲಿ
ಶ್ರದ್ಧೆಯಿಂದ ಅಭ್ಯಾಸ ಮಾಡಿದಲ್ಲಿ ಈಶನ್
ಹಾಗೂ ಜೆ. ಎಸ್. ಗೀತಾರಂತೆ ರಾಜ್ಯ
ಹಾಗೂ ರಾಷ್ಟ್ರದ ಕೀರ್ತಿಯನ್ನು ಮುಂದೆ
ಯೂ ಹೆಚ್ಚಿಸುವುದರಲ್ಲಿ ಸಂಶಯವಿಲ್ಲ.
ಈಕೆ ಈ ಹಿಂದೆ ಕೊಪ್ಪದಲ್ಲಿ ನಡೆದ ರಾಜ್ಯ
ಮಟ್ಟದ ವಾಲಿಬಾಲ್‌ನಲ್ಲಿ ಜಿಲ್ಲಾ ತಂಡದ
ಸದಸ್ಯೆಯಾಗಿ ರಾಜ್ಯ ಮಟ್ಟದ ಪ್ರಶಸ್ತಿ
ಗಳಿಸಿರುವುದನ್ನು ಇಲ್ಲಿ ನೆನೆಯಬಹುದು.

ಕಳೆದ ಸಾಲಿನಲ್ಲಿ ಗ್ರಾಮೀಣ ಕ್ರೀಡಾ
ಕೂಟದ ರಾಜ್ಯ ಮಟ್ಟದ ಜಾವೆಲಿನ್
ಸ್ಪರ್ಧೆಯಲ್ಲಿ ಎರಡನೆ ಸ್ಥಾನ ಗಳಿಸಿದ ಈಕೆ
ನಂತರ ಧಾರವಾಡದಲ್ಲಿ ನಡೆದ ತರಬೇತಿ
ಯಲ್ಲಿ ಭಾಗವಹಿಸಿದ್ದಳು. ಆದರೆ ಅಲ್ಲಿ ನಡೆದ
ರಾಜಕೀಯದಿಂದಾಗಿ ಈಕೆಯನ್ನು ಕೈ
ಬಿಟ್ಟು ಬೇರೆಯವರನ್ನು ರಾಷ್ಟ್ರೀಯ ಕ್ರೀ
ಡೆಗೆ ಕಳುಹಿಸಲಾಗಿತ್ತು. ಈ ಸಾರಿ ಯಾವ
ವಿಘ್ನವೂ ಬಾರದೆ ರಾಷ್ಟ್ರ ಮಟ್ಟದಲ್ಲಿ ಭಾಗ
ವಹಿಸಿ ರಾಜ್ಯಕ್ಕೆ ಕೀರ್ತಿ ತಂದ ಈಕೆಗೆ
ಅಭಿನಂದನೆಗಳು ಹಾಗೂ ಮುಂದೆ ಇನ್ನೂ
ಎತ್ತರೆತ್ತರಕ್ಕೆ ಏರಲೆಂದು ಶುಭ ಹಾರೈಕೆ
ಗಳು.

ಈಕೆಯ ಪ್ರತಿಭೆಯನ್ನು ನಮ್ಮ ಜಿಲ್ಲಾ
ಪರಿಷತ್ತು ಗುರುತಿಸಿ ಎಲ್ಲಾ ರೀತಿಯ
ಉತ್ತೇಜನ ನೀಡಿ ಅಭಿನಂದನೀಯ ಕೆಲಸ
ಮಾಡುವುದೆಂದು ಆಶಿಸುತ್ತೇನೆ.

—ಎಚ್. ಎ. ಗೋಪಾಲ್,
ದಾರದಹಳ್ಳಿ, ಮೂಡಿಗೆರೆ ತಾ||

(ರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಕು|
ಮೀನಾಕ್ಷಿಯ ಸಾಧನೆ ತಿಳಿಯಲು ಕಾತರ
ದಿಂದಿದ್ದ ಊರಿನ ಕ್ರೀಡಾಭಿಮಾನಿಗಳಿಗಾಗ
ಲಿ, ಜಿಲ್ಲೆಯ ಪತ್ರಿಕೆಗಳಿಗಾಗಲಿ ಆವಳ
ಶಾಲೆಯ ಹಿರಿಯರಿಂದ ಅಥವಾ ದೈಹಿಕ
ಶಿಕ್ಷಕರಿಂದ ಯಾವುದೇ ಸುದ್ದಿ ದೊರಕ
ದಿದ್ದುದು ಆಶ್ಚರ್ಯ ಮತ್ತು ದುಃಖದ ಸಂಗತಿ
ಎನ್ನಬೇಕಾಗಿದೆ. —**ಸಂ.**)

ಶೃಂಗೇರಿ ಜೇಸಿ ಶಾಲೆ ಸಹಾಯಾರ್ಥ ಮಾ| ಹಿರಣ್ಣಯ್ಯನವರಿಂದ ನಾಟಕ ಪ್ರದರ್ಶನ ಭರವಸೆ

ಶೃಂಗೇರಿ : ಇಲ್ಲಿನ ಜೂನಿಯರ್ ಛೇಂಬರ್‌ನ ವಾರ್ಷಿಕ ಪತ್ರಿಕೆ 'ನಿರಂತರ' ವನ್ನು ಜ. ೯ ರಂದು ಮಾಸ್ಟರ್ ಹಿರಣ್ಣಯ್ಯನವರು ಬಿಡುಗಡೆ ಮಾಡಿದರು.

ಜೇಸೀ ಶಾಲೆಯ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಈ ಶಾಲೆಯ ಕಟ್ಟಡ ಮತ್ತಿತರ ಅಭಿವೃದ್ಧಿಗಾಗಿ ತಾನೊಂದು ಸಹಾಯಾರ್ಥ ನಾಟಕ ಪ್ರದರ್ಶನವನ್ನು ನಡೆಸಿಕೊಡುವುದಾಗಿ ಅವರು ಘೋಷಿಸಿದರು.

ಕೊಪ್ಪಕ್ಕೆ ಸೋಸಿದ ಕುಡಿವ ನೀರೊದಗಿಸಲು ಸಾರ್ವಜನಿಕ ಹೋರಾಟ ಸಮಿತಿ ಆಗ್ರಹ

ಕೊಪ್ಪ: ಇಲ್ಲಿನ ಸಾರ್ವಜನಿಕ ಹಿತರಕ್ಷಣಾ ಹೋರಾಟ ಸಮಿತಿಯ ನೂತನ ಅಧ್ಯಕ್ಷರಾಗಿ ನ್ಯಾಯವಾದಿ ಎ. ಟಿ. ಕಂಠಿ ಈಚೆಗೆ ಆಯ್ಕೆಯಾಗಿದ್ದಾರೆ. ಇತರರು : ವಾಸುದೇವರಾವ್ (ಗೌರವ ಅಧ್ಯಕ್ಷರು). ಜಯವಂತ ಕಿಣಿ, ಎಚ್. ಟಿ. ಕೃಷ್ಣಮೂರ್ತಿ (ಉಪಾಧ್ಯಕ್ಷರು), ಗೋಪಾಲಗೌಡ (ಪ್ರ. ಕಾರ್ಯದರ್ಶಿ), ಎ. ಎನ್. ಕುಮಾರ್, ಇನೇಶ್, ಧರ್ಮಪ್ಪ (ಸಂಘಟನಾ ಕಾರ್ಯದರ್ಶಿಗಳು), ಸತ್ಯಮೂರ್ತಿ (ಖಜಾಂಚಿ), ದಿನೇಶ್, ಹರೀಶ್ ಕುಮಾರ್, ರತ್ನಾಕರ್, ನೂರ್ ಅಹಮದ್ (ಸಹ ಕಾರ್ಯದರ್ಶಿಗಳು).

ಶಂಕರ್ ಸಾರಿಗೆ ಮಾಲೀಕರು ಜಿಗುಟುತನ ಬಿಟ್ಟು, ಕಾರ್ಮಿಕರ ಜೊತೆ ಸಂಧಾನ ಮಾಡಿಕೊಳ್ಳದಿದ್ದರೆ ಕಂಪೆನಿಯನ್ನು ರಾಷ್ಟ್ರೀಕರಿಸಬೇಕೆಂದು ಒತ್ತಾಯಿಸಿದ ಸಮಿತಿಯ ಸಭೆಯು, ಕೊಪ್ಪ ಜನತೆಗೆ ಕುಡಿವ ನೀರಿಗಾಗಿ ಇನ್ನೊಂದು ಟ್ಯಾಂಕ್ ನಿರ್ಮಿಸಿ, ಸೋಸುವ (ಫಿಲ್ಟರ್) ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿತು.

ಕೊಪ್ಪ ಪಟ್ಟಣ ವ್ಯಾಪ್ತಿಯಲ್ಲಿರುವ ಮೀನು, ಮಾಂಸದ ಅಂಗಡಿಗಳನ್ನು ಸ್ಥಳಾಂತರಿಸಿ, ಒಂದೇ ಕಡೆ ಏರ್ಪಾಡು ಮಾಡುವಂತೆಯೂ ಒತ್ತಾಯಿಸಲಾಯಿತು.

ಯೋಗಾಸನ ತರಬೇತಿ

ಕೊಪ್ಪ : ಇಲ್ಲಿನ ಪಟ್ಟಣ ಶಾಲೆಯಲ್ಲಿ ತಾ|| ೨೩-೧-೯೧ ರಿಂದ ೧೦ ದಿನಗಳ ಕಾಲ ಸಂಜೆ ೬ ರಿಂದ ೭ ಗಂಟೆಯವರೆಗೆ **ಮಹಿಳೆಯರಿಗಾಗಿ ಉಚಿತ** ಯೋಗಾಸನ ತರಬೇತಿ ಶಿಬಿರ ನಡೆಯಲಿದೆ. ಆಸಕ್ತರು— ಶ್ರೀಮತಿ ಶಶಿಕಲಾ ಚಾಮರಾಜ್, ಅಧ್ಯಾಪಕಿ, ಸರ್ಕಾರಿ ಕಿರಿಯ ಕಾಲೇಜು, ಕೊಪ್ಪ ಇವರನ್ನು ಸಂಪರ್ಕಿಸಬಹುದು.

ಮಂಕತ್ರಾಯ

ಆಯುರ್ವೇದ ಕಾಲೇಜು ಉಪನ್ಯಾಸಕರು ಮತ್ತು ಯೋಗ ಪಟು ಡಾ|| ದತ್ತಾತ್ರಿಯವರು ಡಿ. ೩೦ ರಿಂದ ೧೫ ದಿನ ಬಾಳಗಡಿಯಲ್ಲಿ ಪುರುಷರಿಗಾಗಿ ಯೋಗಾಸನ ತರಬೇತಿ ಶಿಬಿರವೊಂದನ್ನು ನಡೆಸಿದರು. ಇದರಲ್ಲಿ ೧೫ ಜನ ಭಾಗವಹಿಸಿದ್ದರು..

ಉನ್ನತಿಯು ನೇಗಿಲಾಗಲಿ

(ಒಂದನೇ ಪುಟದಿಂದ)

ಸಲ್ಲದು. ಲೇಖನದ ಬಗ್ಗೆ ಓದುಗರಿಗೆ ಮೂಡಿದ ಸಂದೇಹಗಳಿಗೆ ಉತ್ತರ ಕೊಡಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಇದ್ದಾಗ ಲೇಖನ ಬರೆಯುವುದು ಸರಿಯಲ್ಲ" ಎಂದು ಶಿವಿ ಮಾತು ಹೇಳಿದ್ದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಸ್. ವಿ. ಹೆಗಡೆ ಅಶೀಸರ ಮಾತನಾಡಿ "ಹೆರಿಗೆಯ ನೋವನ್ನು ಯಾವ ರೀತಿ ಕಾಯಿಯಷ್ಟು ಚೆನ್ನಾಗಿ ಇತರರು ತಿಳಿಯಲು ಸಾಧ್ಯವಿಲ್ಲವೋ, ಕೃಷಿಕರ ಕಷ್ಟ ನಷ್ಟಗಳನ್ನೂ, ಕೃಷಿಕರು ಅರಿತುಕೊಳ್ಳುವಷ್ಟು ಇತರರು ಗ್ರಹಿಸಲು ಕಷ್ಟ. ಒಬ್ಬ ಕೃಷಿಕ ಸೋತಲ್ಲಿ, ಅದೇ ವಿಷಯದಲ್ಲಿ ಇನ್ನೊಬ್ಬ ಸೋಲದಂತೆ ಮಾಡಲು ಮಾಧ್ಯಮವನ್ನು ಚೆನ್ನಾಗಿ ದುಡಿಸಿಕೊಳ್ಳಬಹುದು. ಒಳ್ಳೆಯದನ್ನು ಎಲ್ಲೆಲ್ಲಿ ಮಾಡಿದ್ದಾರೆ, ಅಲ್ಲಿಂದೆಲ್ಲ ಕಲೆಹಾಕಿ ಎಲ್ಲರಿಗೂ ತಿಳಿಸಬಹುದು" ಎಂದರು.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಮೈಸೂರು ಜಿಲ್ಲೆಗಳ ಒಟ್ಟು ೨೪ ಶಿಬಿರಾರ್ಥಿಗಳು ಭಾಗವಹಿಸಿದ್ದ ಈ ಶಿಬಿರದ ತರಬೇತಿದಾರರಾಗಿ ಈಶ್ವರ ದೈತೋಟ, ಶಿವರಾಂ ಪೈಲೂರು, ಸಚ್ಚಿದಾನಂದ ಹೆಗಡೆ, 'ಶ್ರೀ' ಪಡ್ರೆ, ಶಂಪಾ ದೈತೋಟ ಮತ್ತು ಶಂಕರ್ ಸಾರಡ್ಕ ಭಾಗವಹಿಸಿದ್ದರು.

ಕ್ರಿಕೆಟ್ ಪದಾಧಿಕಾರಿಗಳು

ನಾರ್ವೆ : ಇಲ್ಲಿನ ಯಂಗ್ ಸ್ಟಾರ್ ಕ್ರಿಕೆಟ್ ಕ್ಲಬ್‌ನ ನೂತನ ಪದಾಧಿಕಾರಿಗಳು : ಪಿ. ಮಹಮ್ಮದ್ ಸಾದಿಕ್ (ಅಧ್ಯಕ್ಷ), ಎನ್. ಎಸ್. ಹಸನಬ್ಬ (ಉಪಾಧ್ಯಕ್ಷ), ಜೆ. ಹರೀಶ್ (ಕಾರ್ಯದರ್ಶಿ), ಮುಸ್ತಾಕ್ (ಉಪ ಕಾರ್ಯದರ್ಶಿ) ಮತ್ತು ಅಣ್ಣು ಕುಮಾರ್ (ಖಜಾಂಚಿ) ಏಪ್ರಿಲ್‌ನಲ್ಲಿ ಕ್ರಿಕೆಟ್ ಕ್ರೀಡಾ ಕೂಟ ನಡೆಸಲು ಕ್ಲಬ್ ನಿರ್ಧರಿಸಿದೆ.

ಅಡಿಕೆ ಧಾರಣೆ

ಶಿವಮೊಗ್ಗ ೧೮-೧-೯೧

ಸರಕು : ೪೮೦೯-೫೪೧೯

ಬೆಟ್ಟೆ : ೪೦೦೦-೪೮೫೦

ಗೊರಬಲು : ೨೮೦೦-೩೪೦೦

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚು ಕೂಟ, ಕೊಪ್ಪ